# ಮೊದಲ ಪ್ರಯತ್ನವಾಗಿ, ಕರ್ನಾಟಕ ಸರಕಾರವು 'ಗಣಿತ ಕಲಿಕಾ ಆಂದೋಲನ'ವನ್ನು ಅಕ್ಷರ ಫೌಂಡೇಶನ್‌ನ ಸಹಭಾಗಿತ್ವದಲ್ಲಿ ಜಾರಿಗೊಳಿಸುತ್ತಿದೆ.

**ಜೂನ್ 23, 2015:** ಕರ್ನಾಟಕ ಸರಕಾರವು ಅಕ್ಷರ ಫೌಂಡೇಶನ್‌ನ ಸಹಭಾಗಿತ್ವದಲ್ಲಿ ಗಣಿತ ಕಲಿಕಾ ಆಂದೋಲನವನ್ನು ಈ ದಿನದಂದು ಜಾರಿಗೊಳಿಸುತ್ತಿದೆ. ಈ ಕಾರ್ಯಕ್ರಮವು ಸರಕಾರಿ ಶಾಲೆಯ ಮಕ್ಕಳಲ್ಲಿ ಸರಳ ಗಣಿತ ಕೌಶಲ ಮತ್ತು ಗಣಿತವನ್ನು ತರಗತಿಗಳಲ್ಲಿ ಬೋಧಿಸುವ ವಿಧಾನವನ್ನು ಹೇಗೆ ಅಭಿವೃದ್ಧಿ ಪಡಿಸಬಹುದು ಎಂಬುದರ ಕುರಿತಾಗಿದೆ. ಹೈದ್ರಾಬಾದ್ ಕರ್ನಾಟಕ ಪ್ರದೇಶದ ಎಲ್ಲಾ ಸರಕಾರಿ ಶಾಲೆಗಳಲ್ಲಿ ಗಣಿತ ಕಲಿಕಾ ಆಂದೋಲನವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ, ರಾಜ್ಯ ಸರಕಾರವು ಅಕ್ಷರ ಫೌಂಡೇಶನ್‌ನೊಡನೆ ಒಡಂಬಡಿಕೆಗೆ ಸಹಿ ಹಾಕಿದೆ. ಈ ಕಾರ್ಯಕ್ರಮಕ್ಕೆ ಹೈದ್ರಾಬಾದ್ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಧನಸಹಾಯ ನೀಡುತ್ತಿದ್ದು, ಕಾರ್ಯಕ್ರಮವನ್ನು ಸರ್ವ ಶಿಕ್ಷಾ ಅಭಿಯಾನದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಎರಡು ವರ್ಷದ  ಯೋಜನೆಯಲ್ಲಿ, ಅಕ್ಷರ ಗಣಿತ ಬೋಧನಾ – ಕಲಿಕೋಪಕರಣಗಳು, ಸಂಪನ್ಮೂಲ ವ್ಯಕ್ತಿಗಳ ಮತ್ತು ಶಿಕ್ಷಕರ ಸಾಮರ್ಥ್ಯಾಭಿವೃದ್ಧಿ ಹೆಚ್ಚಿಸುವ ಕಾರ್ಯಕ್ರಮಗಳು, ಮಕ್ಕಳ ಕಲಿಕಾ ಫಲಿತಾಂಶಗಳ ಮೌಲ್ಯಮಾಪನ ಒಳಗೊಂಡಿದೆ. ಈ ಕಾರ್ಯಕ್ರಮವು 4 ಮತ್ತು 5 ನೇ ತರಗತಿಯ ಮಕ್ಕಳ ಗಣಿತ ಕಲಿಕೆಯನ್ನು ಮಕ್ಕಳ ಕೇಂದ್ರಿಕೃತದ ಮೂಲಕ ಉತ್ತಮ ಪಡಿಸುವುದಾಗಿದೆ.

'ಪ್ರಮುಖವಾಗಿ, ಗ್ರಾಮೀಣ ಪ್ರದೇಶಗಳ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ರಾಜ್ಯ ಸರ್ಕಾರದ ಬದ್ಧತೆಗಳಲ್ಲೊಂದಾಗಿದೆ. ಗಣಿತ ಕಲಿಕೆಯಲ್ಲಿ ಇದು ಒಂದು ನವೀನ ಮಾದರಿಯ ಕಾರ್ಯಕ್ರಮವಾಗಿದೆ' ಎಂದು ಹೈದ್ರಾಬಾದ್ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಆಧ್ಯಕ್ಷರು ಮತ್ತು ನಗರಾಡಳಿತ ಮತ್ತು ಅಲ್ಪಸಂಖ್ಯಾತ ಇಲಾಖೆಯ ಮಾನ್ಯ ಸಚಿವರಾದ ಡಾ। ಖಮರುಲ್ಲಾ ಇಸ್ಲಾಂ ಅವರು ಹೇಳಿದರು.

'ಗಣಿತ ಕಲಿಕಾ ಆಂದೋಲನವು ಕಲಿಕಾ ಕಾರ್ಯಕ್ರಮದಲ್ಲಿ ಒಂದು ಮಾದರಿಯಾಗಿದ್ದು, ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಸರಳ ಗಣಿತ ಕೌಶಲವನ್ನು ಹೆಚ್ಚಿಸುವ ನಿರೀಕ್ಷೆ ಇದೆ. ಈ ಕಾರ್ಯಕ್ರಮವನ್ನು ಅಕ್ಷರ ಫೌಂಡೇಶನ್‌ನ ಸಹಯೋಗದೊಂದಿಗೆ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯ ಸಹಕಾರವನ್ನು ಉಪಯೋಗಿಸಿಕೊಳ್ಳುವ ಮೂಲಕ ಹೈದ್ರಾಬಾದ್ ಕರ್ನಾಟಕದ ಆರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ' ಎಂದು ಅವರು ವಿವರಿಸಿದರು.

ಅಕ್ಷರ ಫೌಂಡೇಶನ್‌ನೊಂದಿಗಿನ ಸಹಭಾಗಿತ್ವದಲ್ಲಿ ಕರ್ನಾಟಕ ಸರಕಾರವು ಒಡಂಬಡಿಕೆ ಮಾಡಿಕೊಂಡಿರುವ ಈ ಕಾರ್ಯಕ್ರಮವು ಸಾರ್ವಜನಿಕ – ಖಾಸಗಿ ಸಹಭಾಗಿತ್ವದ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಒಂದು ಸಮಗ್ರ ಬೋಧನಾ ವಿಧಾನಗಳನ್ನು ಅಳವಡಿಸಿಕೊಂಡಿರುವ ಗಣಿತ ಕಲಿಕಾ ಆಂದೋಲನವು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ನಿಗದಿಪಡಿಸಿದ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿದೆ ಮತ್ತು ಕರ್ನಾಟಕ ರಾಜ್ಯ ಶಿಕ್ಷಣ ಸಂಶೋಧನಾ ಮತ್ತು ತರಬೇತಿ ಸಂಸ್ಥೆ ರಚಿಸಿರುವ ಪಠ್ಯಪುಸ್ತಕ ಮತ್ತು ಅಭ್ಯಾಸ ಪುಸ್ತಕಗಳಿಗೆ ಪೂರಕವಾಗಿದೆ.

'ಶೈಕ್ಷಣಿಕ ಸ್ಥಿತಿಗತಿಗಳ ವಾರ್ಷಿಕ ವರದಿ (ಅಸರ್ 2014) ಹೇಳುವಂತೆ, ಕರ್ನಾಟಕದ ಸರಕಾರಿ ಶಾಲೆಗಳ 5ನೇ ತರಗತಿಯಲ್ಲಿ ಓದುತ್ತಿರುವ ಶೇ 20.1 ರಷ್ಟು ಮಕ್ಕಳು ಸರಳ ಭಾಗಾಕಾರವನ್ನು ಮಾಡಲು ಸಮರ್ಥರಾಗಿದ್ದಾರೆ. ಗಣಿತ ಕಲಿಕಾ

ಆಂದೋಲನವು ಮಕ್ಕಳಲ್ಲಿ ಗಣಿತದ ಕೌಶಲಗಳನ್ನು ಹೆಚ್ಚಿಸುವಲ್ಲಿ ಶ್ರಮಿಸುತ್ತದೆ ಮತ್ತು ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಸಹಕರಿಸುತ್ತದೆ ಎಂದು ಅಕ್ಷರ ಫೌಂಡೇಶನ್ ಅಧ್ಯಕ್ಷರಾದ ಅಶೋಕ ಕಾಮತ್ ಹೇಳಿದರು.

ಅಕ್ಷರ ಫೌಂಡೇಶನ್ ಮತ್ತು ಕರ್ನಾಟಕ ಸರಕಾರಗಳು ಕಳೆದೊಂದು ದಶಕದಿಂದ ಸಹಭಾಗಿತ್ವದಲ್ಲಿ ಹಲವಾರು ಯಶಸ್ವಿ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿರುತ್ತವೆ.

**ಗಣಿತ ಕಲಿಕಾ ಆಂದೋಲನದ ಕುರಿತು:** ಗಣಿತ ಕಲಿಕಾ ಆಂದೋಲನವು ಒಂದು ಮಾದರಿ ಪೂರಕ ಕಾರ್ಯಕ್ರಮವಾಗಿದ್ದು, ನಾಲ್ಕು ಮತ್ತು ಐದನೇ ತರಗತಿ ಮಕ್ಕಳಲ್ಲಿ ಗಣಿತದಲ್ಲಿರುವ ಕಲಿಕಾ ನ್ಯೂನತೆ ಅಥವಾ ಅಂತರವನ್ನು ಭರ್ತಿ ಮಾಡುವ ಉದ್ದೇಶವನ್ನು ಹೊಂದಿದೆ. ಕೇವಲ ಗಣಿತದ ಪರಿಕಲ್ಪನೆಗಳನ್ನು ಕಂಠಪಾಠವಾಗಿ ಅರಿತುಕೊಳ್ಳುವ ಬದಲಾಗಿ, ಚಟುವಟಿಕಾಧಾರಿತ ಕ್ರಿಯಾಶೀಲ ವಿಧಾನದ ಮತ್ತು ಗುಂಪು ಕಲಿಕೆಯ ಮೂಲಕ ಈ ಕಲಿಕಾ ಅಂತರವನ್ನು ಕಡಿಮೆ ಮಾಡುವ ಕೊಂಡಿಯಾಗಿ ಕೆಲಸ ಮಾಡುವ ಉದ್ದೇಶವನ್ನು ಹೊಂದಿದೆ. ಅಲ್ಲದೇ ಈ ಕಾರ್ಯಕ್ರಮವು ರಾಜ್ಯದ ಶಿಕ್ಷಕರಲ್ಲಿ ಗಣಿತ ವಿಷಯದಲ್ಲಿ ಸಾಮರ್ಥ್ಯವರ್ಧನೆಯನ್ನು ಗಣನೀಯ ಮಾದರಿಯಲ್ಲಿ ಹೆಚ್ಚಿಸುವ ಉದ್ದೇಶವನ್ನೂ ಹೊಂದಿದೆ.

**ಹೈದ್ರಾಬಾದ್ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿ ಕುರಿತು:** ಹೈದ್ರಾಬಾದ್ ಕರ್ನಾಟಕ ಪ್ರಾದೇಶಿಕ ಅಭಿವೃದ್ಧಿ ಮಂಡಳಿಯು ಭಾರತದ ಸಂವಿಧಾನದ 371 (ಜೆ) ಪರಿಚ್ಛೇದ ಮೂಲಕ ದತ್ತವಾದ ವಿಶೇಷ ಸ್ಥಾನಮಾನದ ಭಾಗವಾಗಿರುವುದರಿಂದ, ಈ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಯನ್ನು ನೋಡಿಕೊಳ್ಳುತ್ತಿದೆ. ಈ ಪ್ರದೇಶವು ಕಲ್ಬುರ್ಗಿ, ಯಾದಗೀರ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಬೀದರ್ ಜಿಲ್ಲೆಗಳನ್ನು ಒಳಗೊಂಡಿದೆ. ಮಾನವ ಅಭಿವೃದ್ಧಿ ಸೂಚ್ಯಾಂಕಗಳಲ್ಲಿ ದೇಶದಲ್ಲಿಯೇ ಅತೀ ಹಿಂದುಳಿದ ಪ್ರದೇಶಗಳಲ್ಲಿ ಈ ಜಿಲ್ಲೆಗಳೂ ಸೇರಿವೆ. ಹಾಗೂ ಸಬ್ ಸಹಾರ ಪ್ರದೇಶಕ್ಕಿಂತ ಕೆಳಗಿದೆ.

**ಸರ್ವ ಶಿಕ್ಷಾ ಅಭಿಯಾನದ ಕುರಿತು:** ಸರ್ವ ಶಿಕ್ಷಾ ಅಭಿಯಾನವು ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಖಾತ್ರಿಗೊಳಿಸಲು ಭಾರತ ಸರಕಾರ ಜಾರಿಗೊಳಿಸಿದ ಕಾರ್ಯಕ್ರಮವಾಗಿದೆ. ಭಾರತದ ಸಂವಿಧಾನದ 86ನೇ ತಿದ್ದುಪಡಿಯಲ್ಲಿ ಪ್ರಸ್ತಾಪಿಸಿದಂತೆ, 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವುದು ಮೂಲಭೂತ ಹಕ್ಕು ಆಗಿರುವುದರಿಂದ ಸರಕಾರ ಈ ಕಾರ್ಯಕ್ರಮವನ್ನು ಹುಟ್ಟುಹಾಕಿದೆ. ಸರ್ವ ಶಿಕ್ಷಾ ಅಭಿಯಾನವು ರಾಜ್ಯಗಳ ಪಾಲುದಾರಿಕೆಯಲ್ಲಿ ತನ್ನ ಕಾರ್ಯಕ್ರಮಗಳನ್ನು ದೇಶದಾದ್ಯಂತ ಅನುಷ್ಠಾನಗೊಳಿಸುತ್ತದೆ.

**ಅಕ್ಷರ ಫೌಂಡೇಶನ್‌ನ ಕುರಿತು:** 'ಪ್ರತಿಯೊಂದೂ ಮಗುವು ಶಾಲೆಯಲ್ಲಿದ್ದು, ಉತ್ತಮವಾಗಿ ಕಲಿಯುತ್ತಿರಲಿ' ಎಂಬ ಧ್ಯೇಯದೊಂದಿಗೆ ಅಕ್ಷರ ಫೌಂಡೇಶನ್‌ನನ್ನು ಹುಟ್ಟುಹಾಕಲಾಗಿದೆ. ಗುಣಮಟ್ಟದ ಶಿಕ್ಷಣವು ಪ್ರತಿ ಮಗುವಿನ ನಿರಾಕರಿಸಲಾಗದ ಹಕ್ಕಾಗಿದ್ದು, ಮಕ್ಕಳು ಶಿಕ್ಷಣವನ್ನು ಪಡೆದುಕೊಳ್ಳಲು ಆಗದ ಮತ್ತು ಸಂಪನ್ಮೂಲಗಳ ಕೊರತೆಯ ಕಾರಣಗಳಿಂದಾಗಿ ಶಿಕ್ಷಣದ ಸೌಲಭ್ಯವನ್ನು ಪಡೆಯುವಲ್ಲಿ ವಂಚಿತರಾಗಬಾರದು ಎಂಬುದರಲ್ಲಿ ನಾವು ನಂಬಿಕೆಯನ್ನಿರಿಸಿದ್ದೇವೆ.

***ಹೆಚ್ಚಿನ ಮಾಹಿತಿಗಾಗಿ:*** www.akshara.org.in

ಮಾಧ್ಯಮ ಸಂಪರ್ಕ ಪ್ರತಿನಿಧಿ

payal@akshara.org.in